ಅ) ಆಡಳಿತಾಧಿಕಾರಿ ಮುಂದುವರೆದಿದ್ದಾರೆ.

ಆ) ಸಿ.ಓ.ಡಿ. ತನಿಖೆ ಮಾಡುತ್ತಿದ್ದಾರೆ. ತನಿಖೆ ಮುಂದುವರೆಯುತ್ತಿದೆ.

ಈ) ಬಂದಿದೆ.

ಉ) ಇಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರ ನೇಮಕ

1926 (2335) ಶ್ರೀ ಬಸವರಾಜ ಮಂಡಿ ಮತ್ ಜಿ. (ಚಳ್ಳಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದ ಗ್ರಾಮಾಂತರ ಆಸ್ಪತ್ರೆಗಳಲ್ಲಿ ವೈದ್ಯರು ಆದರಲ್ಲೂ ವಿಶೇಷ ಪರಿಣಿತ ವೈದ್ಯರು ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಚಳ್ಳಕೆರೆ ತಾಲ್ಲೂಕಿನ ಚಳ್ಳಕೆರೆ, ತಳಕು, ಪರಶುರಾಂಪುರ, ಜಾಜೂರು ಮತ್ತು ಮೀರಸಾಬಿಹಳ್ಳಿ ಆಸ್ಪತ್ರೆಗಳ ವೈದ್ಯಾಧಿಕಾರಿಗಳ ಆಲಕ್ಷ್ಯ, ಅಸಮರ್ಪಕತೆ, ಕಾರ್ಯನಿರ್ವಹಣೆ, ಲಂಚ ಪಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಡಾ: ಎ.ಬಿ.ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಈಗ 573 ವೈದ್ಯರನ್ನು ನೇಮಕ ಮಾಡುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಈ ಹೊಸದಾಗಿ ನೇಮಕಾತಿಗೊಳ್ಳುವ ವೈದ್ಯರನ್ನು ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ನೇಮಕ ಮಾಡಲಾಗುವುದು.

ಇ) ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಚಳ್ಳಕೆರೆ ತಾಲ್ಲೂಕಿನಲ್ಲಿರುವ ಆಯುರ್ವೇದಿಕ್ ಆಸ್ಪತ್ರೆಗಳು

1927 (2336) ಶ್ರೀ ಬಸವರಾಜ್ ಮಂಡಿಮತ್ ಜಿ. (ಚಳ್ಳಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ತಾಲ್ಲೂಕಿನ ಯಾವ ಯಾವ ಊರುಗಳಲ್ಲಿ ಆಯುರ್ವೇದಿಕ್ ಆಸ್ಪತ್ರೆಗಳಿವೆ; (ನಗರಗಳ ಹೆಸರುಗಳನ್ನು ನೀಡಲು ವಿನಂತಿಸಿದೆ)

ಆ) ಯಾವ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆ;